ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೨೨ನೇ ಜನವರಿ ೧೯೯೦, ಮಾಘ ೨, ೧೯೧೧ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ರವರು ಪೀಠವನ್ನು ಅಲಂಕರಿಸಿದರು].

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆ ಮತ್ತು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಚಾಮರಾಜನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾಗಿದೆ. ಜನ ಅಲ್ಲಿ ಸಾಯುವ ಸ್ಥಿತಿಯಲ್ಲಿದ್ದಾರೆ. ಈ ವಿಷಯವನ್ನು ಅನೇಕ ಬಾರಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುತ್ತೇನೆ. ಆದರೂ ಕೂಡ ಸರ್ಕಾರದವರು ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಗಮನಹರಿಸುತ್ತಿಲ್ಲ. ....

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ರೈತರ ಸಾಲವನ್ನು ಸ್ಥಗಿತ ಮಾಡಂತ್ತೇವೆಂದು ಹೇಳಿದ್ದರಿ ಆದರೆ ಮತ್ತೆ ವಸೂಲಿಗೆ ಆದೇಶ ಮಾಡಿದ್ದಾರೆ. ಇದು ಅತ್ಯಂತ ಗಂಭೀರವಾದ ಸಮಸ್ಯೆ. ತಾವು ಈ ವಿಷಯವನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕು.....

ಅಧ್ಯಕ್ಷರು.—ಸನ್ಮಾನ್ಯ ಸದಸ್ಯರೇ, ತಮಗೆಲ್ಲರಿಗೂ ನಾನು ಮೊದಲು ನೂತನ ವರ್ಷದ ಶುಭಾಶಯಗಳನ್ನು ಸಲ್ಲಿಸುವುದಕ್ಕೆ ಇಚ್ಛಿಸುತ್ತೇನೆ. ನೂತನ ವರ್ಷ ತಮಗೆ, ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಒಳಿತನ್ನು ತರಲಿ ಎಂದು ಹಾರೈಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಚಾಮರಾಜನಗರ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ಅಲ್ಲಿನ ಜನ ಕುಡಿಯುವುದಕ್ಕೆ ನೀರಿಲ್ಲದೆ ಸಾಯುತ್ತಿದ್ದಾರೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ಅನೇಕ ಬಾರಿ ತಂದಿರುತ್ತೇನೆ. ಈ ಹೊಸ ವರ್ಷದಲ್ಲಿ ಇಂತಹ ವಿಷಯವನ್ನು ಇಲ್ಲಿ ಹೇಳುವುದಕ್ಕೆ ನನಗೆ ಬಹಳ ನೋವಾಗುತ್ತಿದೆ.....

ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

ಅಧ್ಯಕ್ಷರು.—ಈಗ ನಮ್ಮ ಇಂದಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ, ನಾಮನಿರ್ದೇಶನ ಹೊಂದಿದ ಹೊಸ ಸದಸ್ಯರ ಪ್ರಮಾಣ ವಚನ ಸ್ವೀಕಾರ.

Mr. Derrick F. Fullinofaw took Oath in English in the name of God

ಶ್ರೀ ವಾಟಾಳ್ ನಾಗರಾಜ್.—ಈಗಾಗಲೇ ತಮಗೆ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೇನೆ. ಚಾಮರಾಜನಗರಕ್ಕೆ ಕುಡಿಯುವ ನೀರಿಗಾಗಿ ಕಾವೇರಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿಲ್ಲ. ಮತ್ತೆ ಗಡಿ ಸಮಸ್ಯೆಯನ್ನೂ ಕೆಡಿಗಣಿಸಿದ್ದೀರಿ. ಬರಗಾಲದಲ್ಲಿರತಕ್ಕ ಅಲ್ಲಿಯ ಜನ ಮುಖ್ಯಮಂತ್ರಿಗಳಿಗೆ ಈ ಖಾಲಿ ಕೊಡವನ್ನು ಸಲ್ಲಿಸಲು ಕಳುಹಿಸಿದ್ದಾರೆ. ಅಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಭೀಕರವಾಗಿ ಜನ ಸಾಯುತ್ತಿದ್ದಾರೆ. ಅಲ್ಲಿ ರಸ್ತೆ ಇಲ್ಲ, ನಲ್ಲಿ ಇಲ್ಲ, ಕುಡಿಯುವ ನೀರಿಲ್ಲ, ಆ

ತಾಲ್ಲೂಕನ್ನು ಕಡೆಗಾಣಿಸಿದ್ದಾರೆ. ಆದ್ದರಿಂದ ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಹೊಸ ವರ್ಷದ ಬಳುವಳಿಯಾಗಿ ಈ ಖಾಲಿ ಕೊಡವನ್ನು ಅರ್ಪಿಸುತ್ತೇನೆ- ಅಲ್ಲಿಯ ಜನರ ಗೋಳನ್ನು ಕೇಳುವವರೇ ಇಲ್ಲ.

(ಮಾನ್ಯ ವಾಟಾಳ್ ನಾಗರಾಜ್ ಅವರು ಮುಖ್ಯಮಂತ್ರಿಗಳಿಗೆ ಖಾಲಿ ಕೊಡವನ್ನು ಅರ್ಪಿಸಿದರು.)

ಶ್ರೀ ಟಿ.ಎಂ. ಮಂಜುನಾಥ್.—ನನ್ನದೊಂದು ಕ್ರಿಯಾಲೋಪ ಇದೆ. ಯಾರೂ ಈ ಸಭೆಯಲ್ಲಿ, ಯಾವುದೇ ಪದಾರ್ಥವನ್ನು ತರಬಾರದೆಂದು ನಿಯಮ ಇದೆ. ಈಗ ಆ ಸದಸ್ಯರು ಇಲ್ಲಿಗೆ ಖಾಲಿ ಕೊಡವನ್ನು ತಂದಿದ್ದಾರೆ, ಇದು ಸರಿಯಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರದು ಅಗ್ಗದ ಪ್ರಚಾರ, ಇದು ಎಲ್ಲರಿಗೂ ಗೊತ್ತು...

ಶ್ರೀ ಟಿ. ಎಂ. ಮಂಜುನಾಥ್.—ಅಧ್ಯಕ್ಷರೇ, ಈ ತರಹದ ಪ್ರತಿಭಟನೆಗೆ ತಾವು ಅವಕಾಶ ಕೊಡಬಾರದು.....

ಶ್ರೀ ಕೆ.ಎಸ್. ಈಶ್ವರಪ್ಪ.—ರೈತರ ಸಾಲ ವಸೂಲಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ''ಸ್ಟೇ'' ಕೊಟ್ಟಿದ್ದರು. ಆದರೆ ಮತ್ತೆ ಈಗ ಸಾಲ ವಸೂಲಿಗೆ ಆದೇಶ ಕೊಟ್ಟಿದ್ದಾರೆ. ಮಾನ್ಯ ಬಿ. ಎಸ್. ಯಡಿಯೂರಪ್ಪನವರು ರೈತರ ಸಾಲದ ಬಗ್ಗೆ ಹೋರಾಟ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಒಂದು ಸಂತಾಪಸೂಚಕ ನಿರ್ಣಯ ಇದ್ದಕ್ಕೆ ಈ ಸದನದ ಕಾರ್ಯಕಲಾಪಗಳನ್ನು ನಡೆಸತಕ್ಕಂಥ ಬಗ್ಗೆ ಇದಲ್ಲ. ನಮ್ಮ ಮುಂದೆ ಆರ್ಡರ್ ಪೇಪರ್ ಇದೆ. ಏನೇನು ವಿಚಾರಗಳು ಚರ್ಚೆಗೆ ಬರುತ್ತವೆ ಎಂದು ಆ ಆರ್ಡರ್ ಪೇಪರ್‌ನಲ್ಲಿ ನಮೂದಾಗಿದೆ' ಹೀಗೆ ಏಕಾಏಕಿ ಬಂದು ಕೂಡಿಯುವ ನೀರು, ಸಾಲಸೂಟು. ಮತ್ತೊಬ್ಬರು ಇನ್ನೊಂದು ಎಂದರೆ, ಸಭೆಯನ್ನು ಈ ರೀತಿ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ನಾನು ಬಹಳ ವ್ಯಸನದಿಂದ ತಮ್ಮಗಳ ಗಮನವನ್ನು ಇದರ ಬಗ್ಗೆ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್. ಕೆಂಪೇಗೌಡರು ದಿನಾಂಕ ೨೨ನೇ ಜನವರಿ ೧೯೯೦ರಂದು ನಿಧನರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ. ಶ್ರಯುತರು ೭ನೆಯ ವಿಧಾನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶ್ರೀ ಕೆಂಪೇಗೌಡರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯ ಪಾತ್ರವಹಿಸಿ ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸಿದ್ದರು. ಹಾಗೂ ಗ್ರಾಹಕರ ಆಂದೋಲನದಲ್ಲಿ ಮಂಚೂಣಿಯ ನಾಯಕತ್ವವನ್ನು ವಹಿಸಿದ್ದರು. ಜೊತೆಗೆ ಹಲವಾರು ವಿದ್ಯಾಸಂಸ್ಥೆಗಳ ಅಭಿವೃದ್ಧಿಗಾಗಿ ದುಡಿದು ಗಣನೀಯವಾದ ಸೇವೆ ಸಲ್ಲಿಸಿರುತ್ತಾರೆ. ನಿಧನ ಹೊಂದಿದ ಮಾನ್ಯ ಸದಸ್ಯರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಒಂದು ನಿಮಿಷ ಮೌನವನ್ನು ಆಚರಿಸಲಾಯಿತು)

ಶ್ರೀ ಡಿ ಬಿ. ಚಂದ್ರೇಗೌಡ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಾವು ನಿಯಮಾವಳಿಗಳನ್ನು ಉಲ್ಲೇಖ ಮಾಡಿದ್ದೀರಿ. ನಿಯಮಗಳ ವ್ಯಾಪ್ತಿಯೊಳಗೆ ಕೆಲಸ ಮಾಡಬೇಕೆನ್ನುವುದಕ್ಕಂತೂ ನಮ್ಮ ಇಚ್ಛೆ. ಅದಕ್ಕಾಗಿ ಪ್ರಯತ್ನ ಮಾಡಿದ್ದೇವೆ. ಆದರೆ ಇವತ್ತಿನ ಸಭೆಯ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದು ನಿರ್ಧಿಷ್ಟವಾದ ಇಂತಹ ವಿಚಾರಗಳನ್ನೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯ ಆಗಿಲ್ಲ. ಸದಸ್ಯರು ಕಳಂಹಿಸಿರತಕ್ಕಂಥ ಪ್ರಶ್ನೆಗಳಿಗೇ ಆಗಲಿ ಅಥವಾ ೩೧ನೇ ನಿಯಮದಲ್ಲಿ ಕಳುಹಿಸತಕ್ಕಂಥ ವಿಚಾರವನ್ನಾಗಲೀ, ಇಲ್ಲವೇ ಕಾಲಿಂಗ್ ಅಟೆನ್‌ಷನ್ ನೋಟೀಸ್‌ನ್ನಾಗಲೀ, ಯಾವುದನ್ನೂ ತಮ್ಮ ಕಾರ್ಯಾಲಯ ಅಡ್ಮಿಟ್ ಮಾಡಿಲ್ಲ. ಆದುದರಿಂದ ನಾವು ವಿಧಿ ಇಲ್ಲದೆ ನಿಲುವಳಿ ಸೂಚನೆಯನ್ನು ತರಬೇಕಾದಂಥ ಪ್ರಸಂಗಕ್ಕೆ ಈ ಪರಿಸ್ಥಿತಿಯೇ ಕಾರಣ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊದಲು ಈ ವಿಧೇಯಕ ಮುಗಿಯಲಿ,

ಶ್ರೀ ಡಿ. ಬಿ. ಚಂದ್ರೇಗೌಡ.—ಮೊದಲು ನಿಯಮಾವಳಿಗಳ ಪ್ರಕಾರ ಕೆಲಸ ಮಾಡಬೇಕೆನ್ನುವುದಕ್ಕೆ ನಾವು ಭಾಗಿಗಳು. ಆದರೆ ಯಾವ ನಿಯಮಾವಳಿಗಳಲ್ಲಿ ಕೆಲಸ ಮಾಡಬೇಕು. ನಾವು ಕೊಟ್ಟ ಕೊಚ್ಚನ್